Fax: 08282-256262
E-mail: kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನಸಹ್ಯಾದ್ರಿ,
ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

## ಅಧಿಸೂಚನೆ

ವಿಷಯ: ಸ್ನಾತಕೋತ್ತರ ಎಂ.ಬಿ.ಎಫ್.ಐ. ಪದವಿಯನ್ನು ಸ್ನಾತಕೋತ್ತರ ಎಂ.ಕಾಂ. ಪದವಿಗೆ ಸಮಾನವೆಂದು ಪರಿಗಣಿಸುವ ಬಗ್ಗೆ.

ಉಲ್ಲೇಖ : 1. ಕಛೇರಿ ಅದೇಶ ಸಂಖ್ಯೆ.ಕುವಿ:ಶೈವಿ:ಎಸಿ-4:2852:2015-16 ದಿನಾಂಕ 18-08-2015.
2. ಕಾರ್ಯದರ್ಶಿ, ಯುಜಿಸಿ, ನವದೆಹಲಿ ಇವರ ಪತ್ರ ಸಂಖ್ಯೆ:ಎಫ್.9-3/2016 (ಸಿಪಿಪಿ-2), ದಿನಾಂಕ: 19-07-2016
3. ಸರ್ಕಾರದ ಅದೇಶ ಸಂಖ್ಯೆ ಇಡಿ 04 ಯುಎಸ್‌ವಿ 2016 ದಿನಾಂಕ 21-09-2017.
4. ಸರ್ಕಾರದ ಅದೇಶ ಸಂಖ್ಯೆ ಇಡಿ 07 ಯುಎಸ್‌ವಿ 2018 ದಿನಾಂಕ 06-09-2019.
5. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:27-11-2019.

*****

**ಪ್ರಸ್ತಾವನೆ :**

ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಎಂ.ಬಿ.ಎಫ್.ಐ. ಪದವಿಯನ್ನು ಎಂ.ಕಾಂ. ಪದವಿಗೆ ಸಮಾನವೆಂದು ಪರಿಗಣಿಸಿ ಉಲ್ಲೇಖ(1)ರಲ್ಲಿ ಕಛೇರಿ ಆದೇಶ ಹೊರಡಿಸಲಾಗಿತ್ತು. ಕರ್ನಾಟಕ ಲೋಕಸೇವಾ ಅಯೋಗವು ನೇಮಕಾತಿ ಮಂಡಳಿಯಲ್ಲಿ , ಕೆಲವು ಖಾಸಗಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ನೇಮಕಾತಿ ಮಂಡಳಿಯಲ್ಲಿ ಎಂ.ಬಿ.ಎಫ್.ಐ. ಪದವಿಯನ್ನು ಎಂ.ಕಾಂ. ಪದವಿಗೆ ಸಮಾನವೆಂದು ಪರಿಗಣಿಸಿರುವುದಿಲ್ಲವೆಂದು ವಿದ್ಯಾರ್ಥಿಗಳು ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಎಂ.ಬಿ.ಎಫ್.ಐ. ಪದವಿಯನ್ನು ಎಂ.ಕಾಂ. ಪದವಿಗೆ ಸಮಾನವೆಂದು ಅಧಿಸೂಚನೆ ಹೊರಡಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಆದರೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ(ವಿಶ್ವವಿದ್ಯಾಲಯಗಳು-1), ಬೆಂಗಳೂರು ಇವರ ಉಲ್ಲೇಖ(3) ಮತ್ತು (4) ರ ಪತ್ರಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿದ್ದು, ಅದರಲ್ಲಿ, ಕಾರ್ಯದರ್ಶಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗ, ನವದೆಹಲಿ ಇವರು ಹೊರಡಿಸಿರುವ ಉಲ್ಲೇಖ(2)ರ Public Notice on Equivalency of Degrees ನಂ. F9-3/2016(CPP-II), ದಿನಾಂಕ:19-07-2016ರಲ್ಲಿ ಪದವಿ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್‌ಗಳ ಸಮನ್ವಯತೆ ಕುರಿತಾಗಿ ವಿಶ್ವವಿದ್ಯಾಲಯದ ಹಂತದಲ್ಲೇ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ **ಕುವೆಂಪು ವಿಶ್ವವಿದ್ಯಾಲಯದ ಎಂ.ಬಿ.ಎಫ್.ಐ. ಪದವಿಯನ್ನು ಎಂ.ಕಾಂ. ಪದವಿಗೆ ಸಮಾನವೆಂದು ಪರಿಗಣಿಸಿ, ಸದರಿ ಪದವಿಯನ್ನು ಪಡೆದವರು ಬಿ.ಬಿ.ಎಂ./ಬಿ.ಬಿ.ಎ./ವಾಣಿಜ್ಯಶಾಸ್ತ್ರ ಬೋಧಿಸಲು ಅರ್ಹರು** ಮತ್ತು ಪದವಿ **ಪೂರ್ವಕಾಲೇಜುಗಳಲ್ಲಿ ವಾಣಿಜ್ಯ ವಿಭಾಗಕ್ಕೆ ಉಪನ್ಯಾಸಕರಾಗಲು ಹಾಗೂ ಬ್ಯಾಂಕಿಂಗ್, ವಿಮಾಕ್ಷೇತ್ರ ಮತ್ತು ಇತರ ಸರ್ಕಾರಿ ಇಲಾಖೆಗಲ್ಲಿ ಎಂ.ಕಾಂ. ಅಗತ್ಯ ವಿದ್ಯಾರ್ಹತೆ ಇರುವ ಕಡೆಗಳಲ್ಲಿ** ಎಂ.ಬಿ.ಎಫ್.ಐ. ಪದವಿ ಪಡೆದವರೂ ಸಹ **ಅರ್ಹರಾಗಿರುವರೆಂದು** ಉಲ್ಲೇಖ-5ರ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

**ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ-4 (70): 5298 :2019-20, ದಿನಾಂಕ: 28-11-2019**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಯುಜಿಸಿಯ ನಿರ್ದೇಶನ, ಕರ್ನಾಟಕ ಸರ್ಕಾರದ ಸೂಚನೆಯನ್ವಯ ಈ ಹಿಂದೆ ವಿಶ್ವವಿದ್ಯಾಲಯದ ಸಮನ್ವಯ ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ತಿನಲ್ಲಿ ಆಗಿರುವ ನಿರ್ಣಯಗಳು ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, **ಕುವೆಂಪು ವಿಶ್ವವಿದ್ಯಾಲಯದ ಎಂ.ಬಿ.ಎಫ್.ಐ. ಪದವಿಯನ್ನು ಎಂ.ಕಾಂ. ಪದವಿಗೆ ಸಮಾನವೆಂದು ಪರಿಗಣಿಸಿ, ಸದರಿ ಪದವಿಗಳನ್ನು ಪಡೆದವರು** ಬಿ.ಬಿ.ಎಂ./ಬಿ.ಬಿ.ಎ. / **ವಾಣಿಜ್ಯಶಾಸ್ತ್ರ ಬೋಧಿಸಲು ಅರ್ಹರು ಎಂದು** ಪರಿಗಣಿಸಲಾಗಿದೆ ಮತ್ತು ಪದವಿ **ಪೂರ್ವಕಾಲೇಜುಗಳಲ್ಲಿ ವಾಣಿಜ್ಯ ವಿಭಾಗಕ್ಕೆ ಉಪನ್ಯಾಸಕರಾಗಲು ಹಾಗೂ ಬ್ಯಾಂಕಿಂಗ್, ವಿಮಾಕ್ಷೇತ್ರ ಮತ್ತು ಇತರ ಸರ್ಕಾರಿ ಇಲಾಖೆಗಲ್ಲಿ ಎಂ.ಕಾಂ.** ಅಗತ್ಯ ವಿದ್ಯಾರ್ಹತೆ ಇರುವ ಕಡೆಗಳಲ್ಲಿ ಎಂ.ಬಿ.ಎಫ್.ಐ. ಪದವಿ ಪಡೆದವರೂ ಸಹ ಅರ್ಹರಾಗಿರುವರೆಂದು ಈ ಮೂಲಕ ಅಧಿಸೂಚಿಸಲಾಗಿದೆ.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

(ಡಾ. ಧರಣಿ ಕುಮಾರ್ ಪಿ.)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ